Sri A. R. BADARI NARAYAN.—It is seen from Annexure 'A' that the Minister has toured for 60 days in Kolar, one day in Bijapur, two days in Raichur and 2 days in Gulbarga. Why is it Kolar has been discriminated as against other districts ?

Sri RAMAKRISHNA HEGDE.—There is no question of discrimination. It is not a question of equal distirbution of tours.

Wherever the Minister finds it necessity to go, he will tour.

ಶ್ರೀ ಜಿ. ದುಗಪ್ಪ.—ಸ್ವಾಮಿ, ಈ ಮಂತ್ರಿಗಳು ಬಹಳ ಕಷ್ಟಪಟ್ಟುಕೊಂಡು ಕಾಂಗ್ರೆಸ್ ಅಧ್ಯಕ್ಷರ ಜೊತೆಯಲ್ಲಿ ಸದಸ್ಯರನ್ನು ಎನ್‌ರೋಲ್ ಮಾಡುವುದಕ್ಕೆ ರಿಜಿಸ್ಟರುಗಳನ್ನು ಹೊತ್ತುಕೊಂಡು ಹೋಗುತ್ತಿದ್ದರೆಂದು ಜನರೆನ್ನುತ್ತಾರೆ. ನಿಜವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಿಜವಲ್ಲ.

Improvement of Arasikere-Maganahalli Road

113. Sri B. H. YANKA NAIK (Harapanahalli).—

Will the Minister for Public Works be pleased to state :—

(*a*) whether it is a fact that Arasikere-Maganahalli road (passing through Thawdur Kavalahalli, Kanchikere and Suttur) was taken over by Government of India in 1951–52 ;

(*b*) if so, the amount spent so far on the said road ;

(*c*) whether they have any programme to improve the said road ?

Sri BASAVARAJ MAGAVI (Deputy Minister for Public Works).—

(*a*) No.

(*b*) Does not arise in view of reply to clause (*a*) above.

(*c*) Will be considered subject to availability of funds.

ಶ್ರೀ ಬಿ. ಎಚ್. ಯಂಕನಾಯಕ್.—ಸ್ವಾಮಿ, ಸರ್ಕಾರದವರು ಇಲ್ಲಿ ಮೆಟಲ್ ಹಾಕಿಸುವುದಕ್ಕೆ 3-4 ಲಕ್ಷ ರೂಪಾಯಿ ಖರ್ಚು ಮಾಡಿರುವುದು ನಿಜವೇ, ಸುಳ್ಳೇ ?

ಶ್ರೀ ಬಸವರಾಜ ಮಾಗಾವಿ.—ಹೌದು. ಇದುವರೆಗೆ 3.15 ಲಕ್ಷ ರೂಪಾಯಿಗಳು ಇದುವರೆಗೆ ಖರ್ಚು ಮಾಡಿದ್ದೇವೆ.

ಶ್ರೀ ಬಿ. ಎಚ್. ಯಂಕನಾಯಕ್.—ಏತಕ್ಕಾಗಿ ಇಷ್ಟು ಹಣ ಖರ್ಚು ಮಾಡಿದ್ದೀರಿ ?

ಶ್ರೀ ಬಸವರಾಜ ಮಾಗಾವಿ.—ಈ ರಸ್ತೆಯನ್ನು 2 ಸೆಕ್ಷನ್‌ಗಳಾಗಿ ವಿಂಗಡಿಸಿ ಮೊದಲನೆ ಸೆಕ್ಷನ್ ದಾವಣಗೆರೆಯಿಂದ ಮಾಗಲಹಳ್ಳಿಗೆ ಆ ರಸ್ತೆ, ಮೇಲೆ ಒಟ್ಟು 5 ಮೈಲಿ 4 ಫರ್ಲಾಂಗ್‌ಗೆ 3.15 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಒಟ್ಟು ಆ ಕೆಲಸಗಳಿಗೆ 5.15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಅಂದಾಜು ಇಟ್ಟುಕೊಂಡಿದ್ದೇವೆ.